ಭಾರತೀಯ ಯುವಪೀಳಿಗೆಯಲ್ಲಿ ಬಹುಸಾಮಾನ್ಯ ಎಂದು ಹೇಳಬಹುದಾದ ದೊಡ್ಡ ಕನಸದು ಯಾವುದು? ಇದೇನು ಮಿಲಿಯನ್ ಡಾಲರ್ ಪ್ರಶ್ನೆಯಲ್ಲ. ಎಸ್‌ಎಸ್‌ಎಲ್‌ಸಿಯಿಂದ ಸ್ನಾತಕೋತ್ತರ ಪದವಿವರೆಗೆ ಯಾವುದೇ ಪರೀಕ್ಷೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಯನ್ನು ತಡೆದು ಕೇಳಿನೋಡಿ, ನಿಮ್ಮ ಭವಿಷ್ಯದ ಕನಸು ಯಾವುದೆಂದು. ಒಂದಿನಿತೂ ತಡಮಾಡದೆ, ಒಂಚೂರೂ ತಡವರಿಸದೆ ತಟ್ಟಂತ ಬರುವ ಉತ್ತರ ಭಾರತೀಯ ನಾಗರಿಕ ಸೇವೆಯನ್ನು ಸೇರಬೇಕೆನ್ನುವುದೇ ಆಗಿರುತ್ತದೆ. ದೇಶದಲ್ಲಿ ಬೇರೆ ಯಾವುದೇ ಉದ್ಯೋಗಕ್ಕೆ ಇಲ್ಲದ ದೊಡ್ಡ ಚರಿಷ್ಮಾವೊಂದು ಈ 'ಸೇವೆ'ಗೆ ಇದೆ. ಹಾಗೆಂದೇ ಈ ಹುದ್ದೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ನಡೆಸುವ ಪರೀಕ್ಷೆಗಳು ಮತ್ತು ಅವುಗಳ ಫಲಿತಾಂಶಗಳು ಭಾರಿ ಸದ್ದು ಮಾಡುತ್ತವೆ. ಕೆಲವು ವಾರಗಳ ಹಿಂದೆ ಹೊರಬಿದ್ದ ಪ್ರಸಕ್ತ ವರ್ಷದ ಪರೀಕ್ಷಾ ಫಲಿತಾಂಶ ದೇಶದ ಗ್ರಾಮಾಂತರ ಭಾಗದಲ್ಲಿ ದೊಡ್ಡ ಸಂಚಲನವನ್ನು ಮೂಡಿಸಿದೆ. ಗ್ರಾಮೀಣ ಭಾಗದ ಪ್ರತಿಭಾನ್ವಿತರೇ ಹೆಚ್ಚಾಗಿ ಈ ಸಲ ಆಯ್ಕೆಯಾಗಿರುವುದು ಇದಕ್ಕೆ ಕಾರಣ.

ರೈತನಾಗಿದ್ದ ತಂದೆಯು ಸಾಲದ ಹೊರೆಯಿಂದ ತೀರಿಹೋದಾಗ ಮನೆ ನಿರ್ವಹಣೆಯ ಬಂಡಿಯನ್ನೂ ಎಳೆಯಲು ಹೆಗಲು ಕೊಡುತ್ತಾ ನಾಗರಿಕ ಸೇವಾ ಪರೀಕ್ಷೆಯಲ್ಲಿ ಗೆಲುವಿನ ನಗೆ ಬೀರಿದ ತುಮಕೂರಿನ ಎಂ. ಅರುಣಾ ಅವರಿಂದ ಹಿಡಿದು ಪೊಲೀಸ್ ಇಲಾಖೆಯ ಕ್ಲರ್ಕ್ ಹುದ್ದೆಯಿಂದ ಸೀದಾ ಐಎಎಸ್ ಅಧಿಕಾರಿಯ ಕುರ್ಚಿಗೆ ನೆಗೆದ ಕೇರಳದ ಮಿನ್ನು ಪಿ.ಎಂ. ಅವರವರೆಗೆ ಎಷ್ಟೊಂದು ಯಶಸ್ವಿನ ಕಥೆಗಳು! ಈ ನಡುವೆ ಕಲಬುರ್ಗಿಯಿಂದ, ವಿಜಯಪುರದಿಂದ, ಬೀದರ್‌ನಿಂದ, ಕೊಪ್ಪಳದಿಂದ, ಶಿರಸಿಯಿಂದ, ಬೆಳಗಾವಿಯಿಂದ, ದಾವಣಗೆರೆಯಿಂದ, ಹಾಸನದಿಂದ ಹೀಗೆ ರಾಜ್ಯದ ನಾನಾ ಕಡೆಗಳಿಂದ ಇಂತಹ ಯಶೋಗಾಥೆಗಳು ತೇಲಿ ಬಂದಿದ್ದರಿಂದ ಸ್ಫೂರ್ತಿಯ ಚಿಲುಮೆಯೊಂದು ಎಲ್ಲೆಡೆ ಪುಟಿದೆದ್ದು ನಿಂತಿರುವುದು ಸುಳ್ಳಲ್ಲ.

## ಒಂದು ಪುಟ್ಟ ಫ್ಲ್ಯಾಶ್‌ಬ್ಯಾಕ್

ಅಂದಹಾಗೆ, ಭಾರತೀಯ ನಾಗರಿಕ ಸೇವೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಡುವ ಹೊಣೆ ಹೊತ್ತಿರುವುದು ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ). ಈ ಪ್ರತಿಷ್ಠಿತ ಹುದ್ದೆಗಳು ಮಾತ್ರವಲ್ಲದೆ ದೇಶದ ಬಹುಪಾಲು ಕೇಂದ್ರ ಸರ್ಕಾರದ ಉದ್ಯೋಗಗಳ ನೇಮಕಾತಿ ಪ್ರಕ್ರಿಯೆಯನ್ನು ನಡೆಸುವ ಏಜೆನ್ಸಿ ಇದಾಗಿದೆ. ಈ ಸಲದ ಯುಪಿಎಸ್‌ಸಿ ಪರೀಕ್ಷೆಯ ಫಲಿತಾಂಶ ಉಂಟುಮಾಡಿದ ಪ್ರಭಾವದ ಮೇಲೆ ಕಣ್ಣು ಹಾಯಿಸುವ ಮುನ್ನ ಯುಪಿಎಸ್‌ಸಿಯ ಇತಿಹಾಸವನ್ನೂ ತುಸು ಅವಲೋಕಿಸೋಣ. ಅದರ ಇತಿಹಾಸ ಅದೆಷ್ಟೊಂದು ರೋಚಕ ಗೊತ್ತೆ?

ದೇಶದಲ್ಲಿ ನಾಗರಿಕ ಸೇವೆಯ ಪರಿಕಲ್ಪನೆಯು ಮೌರ್ಯ ಹಾಗೂ ಮೊಘಲ್ ದೊರೆಗಳ ಕಾಲದಲ್ಲೂ ಇತ್ತು. ಆಸ್ಥಾನದ ಉನ್ನತ ಹುದ್ದೆಗಳಿಗೆ ಪರೀಕ್ಷೆ ನಡೆಸಿಯೇ ನೇಮಕಾತಿ ಮಾಡಿಕೊಳ್ಳಲಾಗುತ್ತಿತ್ತು ಎಂದು ಹೇಳುತ್ತವೆ ಇತಿಹಾಸದ ಪುಟಗಳು. ರಾಜರ ಆಡಳಿತದಲ್ಲಿ 'ರಾಜ ಸೇವಾಸಕ್ತರು' ಇರುತ್ತಿದ್ದರು. ದಿವಾನರ ಮಕ್ಕಳೇ ದಿವಾನರಾಗುವುದು, ಅಮಲ್ದಾರರ ಮಕ್ಕಳೇ ಅಮಲ್ದಾರರಾಗುವುದು ರೂಢಿಯಾಗಿದ್ದ ದಿನಗಳವು. ಆದರೆ, ಭಾರತದಲ್ಲಿ ಈ ವ್ಯವಸ್ಥೆಗೊಂದು ಯೋಜಿತರೂಪ ನೀಡಿದ್ದು ಮಾತ್ರ ಈಸ್ಟ್ ಇಂಡಿಯಾ ಕಂಪನಿ. ಮೊದಮೊದಲು ಅದರ ನಿರ್ದೇಶಕರೇ ನಾಗರಿಕ ಸೇವೆಗೆ ಅಭ್ಯರ್ಥಿಗಳನ್ನು ನಾಮನಿರ್ದೇಶನ ಮಾಡುತ್ತಿದ್ದರು. ಲಂಡನ್ನಿನ ಹ್ಯಾಲಿಬರಿ ಕಾಲೇಜಿನಲ್ಲಿ ಅವರಿಗೆ ತರಬೇತಿ ಕೊಡಿಸಿ, ನಂತರ ಅವರನ್ನು ಸೇವೆ ಸಲ್ಲಿಸುವ ಸಲುವಾಗಿ ಭಾರತಕ್ಕೆ ಕರೆದುಕೊಂಡು ಬರಲಾಗುತ್ತಿತ್ತು.

ಪ್ರತಿಭೆಯನ್ನು ಆಧರಿಸಿ ನಾಗರಿಕ ಸೇವೆಗೆ ಅಭ್ಯರ್ಥಿಗಳನ್ನು ಆಯ್ಕೆಮಾಡುವ ಪರಿಪಾಟ ಆರಂಭವಾಗಿದ್ದು 1854ರಲ್ಲಿ. ಬ್ರಿಟಿಷ್ ಸಂಸತ್ತು ನೇಮಿಸಿದ್ದ ಲಾರ್ಡ್ ಮೆಕಾಲೆ ಸಮಿತಿ ಮಾಡಿದ್ದ ಶಿಫಾರಸಿನ ಮೇರೆಗೆ ಈ ವ್ಯವಸ್ಥೆಯನ್ನು ಜಾರಿಗೆ ತರಲಾಗಿತ್ತು. ಈಸ್ಟ್ ಇಂಡಿಯಾ ಕಂಪನಿಯ ನಿರ್ದೇಶಕರು ಅಭ್ಯರ್ಥಿಗಳನ್ನು ನಾಮನಿರ್ದೇಶನದ ಮೂಲಕ ಆಯ್ಕೆ ಮಾಡುತ್ತಿದ್ದ ಸಂಪ್ರದಾಯ ಸ್ಥಗಿತಗೊಂಡು, ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಆಯ್ಕೆಮಾಡುವ ಹೊಸ ವ್ಯವಸ್ಥೆಗಾಗಿ ಲಂಡನ್ನಿನಲ್ಲಿ ಅದೇ ವರ್ಷ (1854) ನಾಗರಿಕ ಸೇವಾ ಆಯೋಗವನ್ನು ಆರಂಭಿಸಲಾಯಿತು. ಸೂಕ್ತ ಅಭ್ಯರ್ಥಿಗಳನ್ನು ಆಯ್ಕೆಮಾಡಲು ಸ್ಪರ್ಧಾತ್ಮಕ ಪರೀಕ್ಷೆಗಳು ಮರುವರ್ಷ, ಅಂದರೆ 1855ರಲ್ಲಿ, ಆರಂಭವಾದವು.

ಆಗ ಭಾರತೀಯ ಆಡಳಿತ ಸೇವೆಗೆ ಲಂಡನ್ನಿನಲ್ಲಿ ಮಾತ್ರ ಪರೀಕ್ಷೆಗಳನ್ನು ನಡೆಸಲಾಗುತ್ತಿತ್ತು. 18ರಿಂದ



ಮೊದಲ ರ್‍ಯಾಂಕ್‌ನ ಸಂಭ್ರಮ...
ಶ್ರುತಿ ಶರ್ಮಾ ಖುಷಿಯ ನಗು